



ಅರುಣ ಪಿ. ಭಟ್ಟ

## ವಾರಭವಿಷ್ಯ 30.7.2020ರಿಂದ 5.8.2020ರವರೆಗೆ




ಕಚೇರಿ ಕೆಲಸದಲ್ಲಿ ಪ್ರಯತ್ನದಿಂದ ಶುಭ. ವಾರದ ಕೊನೆಗೆ ಚಿಕ್ಕ ಪ್ರವಾಸ ಕೈಗೊಳ್ಳುತ್ತೀರಿ. ಮನೆಯಲ್ಲಿ ಕುಟುಂಬ ವರ್ಗದವರ ನಡುವೆ ಗೊಂದಲ ಉಂಟಾಗಬಹುದು. ಬೇಡದ ವ್ಯಕ್ತಿಗಳ ಆಗಮನ. ತಾಯಿ ಆರೋಗ್ಯದಲ್ಲಿ ವ್ಯತ್ಯಾಸ ಸಾಧ್ಯತೆ. ಸೇವಕರಿಂದ ಹರ್ಷ. ವಾರದ ಮಧ್ಯಭಾಗದಲ್ಲಿ ಮನಕ್ಕೆ ಸಂತೋಷಕರ ಘಟನೆಗಳು ನಡೆಯುತ್ತವೆ. ಶುಭದಿನ 3. ದೇವ್ಯಪರಾದ ಕ್ಷಮಾಪನ ಸ್ತೋತ್ರ 12 ಸಾರಿ ಪಠಣ ಮಾಡಿ.




ನಿಮ್ಮ ವೈಯಕ್ತಿಕ ಶ್ರಮದಿಂದ ಹೆಚ್ಚಿನ ಯಶಸ್ಸು ಪಡೆಯಲು ಸಾಧ್ಯವಾಗುತ್ತದೆ. ಇದರಿಂದ ನೀವು ಸಂತುಷ್ಟಗೊಳ್ಳುತ್ತೀರಿ. ಬಹುದಿನಗಳ ಆಕಾಂಕ್ಷೆ ಪೂರ್ಣವಾಗಲು ವೇದಿಕೆ ಸಿದ್ಧವಾಗುವುದು. ಅರ್ಧಕ್ಕೆ ನಿಂತ ಮನೆ ಕೆಲಸಕ್ಕೆ ಚಾಲನೆ ದೊರೆಯುವುದು. ಸಹೋದರ ಸಹಾಯ. ವಾಹನ ಖರಿದಿಗೆ ಉತ್ತಮ ಸಮಯ. ಅನಾರೋಗ್ಯ ಸಂಭವ. ಲೇಖನಿ ಕೆಲಸದಲ್ಲಿ ಪ್ರಗತಿ. ಶುಭದಿನ 5. ವೆಂಕಟೇಶ್ವರ ಪ್ರಾರ್ಥನೆ ಮಾಡಿರಿ.




ಸಮಸ್ಯೆಗಳ ಸರಮಾಲೆಯಲ್ಲಿ ಈ ವಾರ ಕಳೆಯಬೇಕಾಗುತ್ತದೆ. ಸ್ಪರ್ಧಾತ್ಮಕ ಪೈಪೋಟಿಯಲ್ಲಿ ಅಪಜಯ ಸಾಧ್ಯತೆ ಇದೆ. ವಿನಾಕಾರಣ ಭಯದ ವಾತಾವರಣ ನಿರ್ಮಾಣವಾಗಲಿದೆ. ಆದರೆ ಕೌಟುಂಬಿಕ ಸೌಖ್ಯ ಚೆನ್ನಾಗಿರುವುದು. ಕ್ರಯ ವಿಕ್ರಯಗಳಲ್ಲಿ ಒಳ್ಳೆಯ ಲಾಭ. ಕೋರ್ಟ್ ಪ್ರಕರಣಗಳನ್ನು ಮುಂದೂಡಿರಿ. ಶುಭದಿನ 4. ನವನಾಗನಾಮ ಸ್ತೋತ್ರ 18 ಸಾರಿ ಪಠಿಸಿರಿ.




ವಾರವಿಡೀ ಶುಕ್ರನು ಏರಿಕೆ ಕ್ರಮದಲ್ಲಿ ಶುಭ ನೀಡುವನು. ಜನ್ಮದಲ್ಲಿ ಬುಧ, ಶುಕ್ರ, ಯುತಿ ಇದೆ. ಉತ್ತಮ ಆರೋಗ್ಯ. ಅನಿರೀಕ್ಷಿತವಾಗಿ ಭಾಗ್ಯದ ಬಾಗಿಲು ತೆರೆಯುವುದು. ಶತ್ರುಗಳು ಪರಾಜಯಗೊಂಡು ನಿಮ್ಮ ಹಾದಿಯನ್ನು ಸುಗಮಗೊಳಿಸುತ್ತಾರೆ. ಬಂಧುಗಳಿಂದ ಶುಭ ಸಂದೇಶ. ವಾರದ ಪ್ರಾರಂಭದಲ್ಲಿ ಅನಿರೀಕ್ಷಿತ ಖರ್ಚು. ಶುಭದಿನ 2. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.




ಅಧಿಕ ಖರ್ಚು ಉಂಟಾಗುತ್ತದೆ. ನಿರಾಸೆಯ ಪ್ರಸಂಗಗಳು ವಾರವಿಡೀ ಮುಂದುವರಿಯುವುದು. ಬರುವ ಲಾಭ ಅರ್ಧದಲ್ಲಿ ತಡೆಯುವುದು. ಸ್ನೇಹಿತರಿಗೆ ಶುಭಕಾರ್ಯಕ್ಕೆ ಸಹಾಯ ಮಾಡುವಿರಿ. ಮಾನಸಿಕ ಗೊಂದಲ. ಹೊಟ್ಟೆನೋವಿನ ಉಪದ್ರವ ಕಾಡುತ್ತದೆ. ಅಧಿಕಾರ ಪ್ರಾಪ್ತಿಯ ರಂಗ ಸಿದ್ಧತೆಗೆ ಕೊಂಚ ತೊಡಕು. ಶುಭದಿನ 5. ಮಾರುತಿ ಉಪಾಸನೆ ಹನುಮಾನ್ ಕವಚ ಪಠಿಸಿರಿ.




ಅಧಿಕ ಶ್ರಮವಿಲ್ಲದೆ ನಿಮ್ಮ ಕೆಲಸ ಕಾರ್ಯಗಳು ಯಶಸ್ವಿಯಾಗಿ ಪೂರ್ಣಗೊಳ್ಳುತ್ತವೆ. ಮಧ್ಯಸ್ತಿಕೆದಾರರಿಂದ ವಿವಾಹದ ಬಗ್ಗೆ ಶುಭಸುದ್ದಿ ದೊರಕುವದು. ದೂರವಾಗಿದ್ದ ಹಳೆಯ ಆಪ್ತರು ಹತ್ತಿರವಾಗುವರು. ವ್ಯಾಪಾರದಲ್ಲಿ ಲಾಭ. ವಾಹನ ಸೌಖ್ಯ. ವಾರಾಂತ್ಯದ ಪ್ರವಾಸದಲ್ಲಿ ತೊಂದರೆ ಆಗುವ ಸಂಭವ ಇದೆ. ಕುಟುಂಬದಲ್ಲಿ ನೆಮ್ಮದಿ ನೆಲೆಯಾಗಿರುವುದು. ಶುಭದಿನ 5. ಗಣಪತಿಗೆ 108 ದೂರ್ವಾರ್ಚನೆ ಮಾಡಿರಿ.




ಈ ತಿಂಗಳ ರಾಶಿಫಲದ ಅನುಗುಣವಾಗಿ ಶುಭವಾಗಲಿದೆ. ದಶಮದ ಬುಧ, ಶುಕ್ರ, ಯುತಿಯಿಂದ ಅಧಿಕಾರ ಪ್ರಾಪ್ತಿ. ಸರಕಾರದಿಂದ ಆರ್ಥಿಕ ನೆರವು ಸಿಗಲಿದೆ. ನಿಮ್ಮ ಕೆಲಸಗಳಿಗೆ ಮನ್ನಣೆಯೂ ದೊರೆಯುತ್ತದೆ. ದಾಂಪತ್ಯದಲ್ಲಿ ಪ್ರಗತಿಯಲ್ಲಿ ಉಂಟಾಗಲಿದೆ. ಹೊಸ ಉದ್ಯೋಗ ಶುರುಮಾಡಲು ಇದು ಸಕಾಲ. ಶುಭ ದಿನ 3. ನವಗ್ರಹ ಸ್ತೋತ್ರ ಪಠಣ ಮಾಡಿರಿ.




ನಿಮ್ಮ ವೈಯಕ್ತಿಕ ಶ್ರಮದಿಂದ ಸಾಡೆಸಾತಿ ಇದ್ದರೂ ಯಶಸ್ಸು ಪಡೆಯುವಿರಿ. ನಿಮ್ಮ ಅರ್ಹತೆಗೆ ಅನುಸಾರ ದೂರ ಪ್ರವಾಸ ಯೋಗ ಬರಲಿದೆ. ಸ್ತ್ರೀ ಮೂಲಕ ಅರ್ಥಲಾಭ. ನೌಕರರಿಗೆ ಕೆಲಸದಲ್ಲಿ ಸ್ಥಿರತೆ. ಮನೆಯಲ್ಲಿ ದೇವತಾರ್ಚನೆ ಕಾರ್ಯ ಮಾಡುವಿರಿ. ಕೌಟುಂಬದಲ್ಲಿ ಉಂಟಾಗುವ ಭಿನ್ನಾಭಿಪ್ರಾಯಗಳಿಂದ ಕಲಹವಾಗಬಹುದು. ವಾರದ ಕೊನೆಯಲ್ಲಿ ಸಂತಸ. ಶುಭದಿನ 4. ಗೌರಿಪೂಜೆ, ಗೋಪೂಜೆ ಮಾಡಿರಿ.




ಖಂಡಿತ ತೊಂದರೆಯಲ್ಲಿ ಸಿಲುಕಿದ ರಾಶಿ. ಹೊಯ್ದಾಡುವ ಮನಸ್ಸು. ಹೆಂಡತಿಯ ಅನಾರೋಗ್ಯದಿಂದ ಅಧಿಕ ಖರ್ಚು. ಕೆಲಸದಲ್ಲಿ ಆಕಸ್ಮಿಕವಾಗಿ ಸಂಭವಿಸುವ ತಪ್ಪಿನಿಂದ ಅಪರಾಧಿ ಭಾವ ಕಾಡಲಿದೆ. ನೀರಿನಿಂದ ಕಂಟಕ ಇರುವುದರಿಂದ ಎಚ್ಚರಿಕೆ ತೆಗೆದುಕೊಳ್ಳುವುದು ಉತ್ತಮ. ಅಧಿಕಾರ ಭಂಗ ಪ್ರಸಂಗ. ಮಕ್ಕಳ ಆರೋಗ್ಯದಲ್ಲಿ ಏರುಪೇರು. ಶುಭದಿನ 2. ಸದ್ಗುರು ಆರಾಧನೆ ಮಾಡಿ.




ಅತ್ಯುತ್ತಮ ಶುಭ ಘಟನೆಗಳಿಂದ ಆಪತ್ತನ್ನೂ ಎದುರಿಸುವ ಶಕ್ತಿ ಲಭಿಸಲಿದೆ. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಉತ್ತಮ ಯಶ ಪ್ರಾಪ್ತಿಯಾಗುತ್ತದೆ. ಹೊಸವಸ್ತು ಖರೀದಿಸುತ್ತೀರಿ. ಗೃಹಿಣಿಯರಿಗೆ ಆಭರಣ ಖರೀದಿ ಯೋಗ ಇದೆ. ಕ್ರೀಡಾಪಟುಗಳಿಗೆ ಸನ್ಮಾನದ ಗರಿಮೆ. ಆರೋಗ್ಯದಲ್ಲಿ ಚೇತರಿಕೆ ಇರುತ್ತದೆ. ಬಂಧುಗಳಿಂದ ಪ್ರೋತ್ಸಾಹ ಲಭಿಸಲಿದೆ. ಶುಭದಿನ 4. ಗಣಪತಿ ಆರಾಧನೆ ಮಾಡಿರಿ




ಬಹುದಿನಗಳ ಕೋರ್ಟ್ ಪ್ರಕರಣ ಮುಗಿಯುತ್ತದೆ. ಶತ್ರುನಿಗ್ರಹ. ಆರೋಗ್ಯದಲ್ಲಿ ಸುಧಾರಣೆಯಾಗಲಿದೆ. ಕೆಲಸದಲ್ಲಿ ಬಡ್ತಿ ಮತ್ತು ವರ್ಗಾವಣೆ ಆಗಬಹುದು. ನೌಕರ ವರ್ಗದವರಿಗೆ ಕೆಲಸದಲ್ಲಿ ಸ್ಥಿರತೆ. ಆರೋಗ್ಯ ಉತ್ತಮವಾಗಿ ಇರಲಿದೆ. ಶೈಕ್ಷಣಿಕ ಕ್ಷೇತ್ರದವರಿಗೆ ಕೊಂಚ ನಿರಾಳ. ವಾಹನ ಖರಿದಿಗೆ ಉತ್ತಮ ಸಮಯ. ಶುಭದಿನ 4. ಲಕ್ಷ್ಮೀನರಸಿಂಹ ಕ್ಷೇತ್ರದರ್ಶನ ಮಾಡಿರಿ.




ಕ್ರೀಡಾಪಟುಗಳಿಗೆ ಉತ್ತಮ ಯಶ. ಷೇರು ವ್ಯವಹಾರದಾರರಿಗೆ ಅನಿರೀಕ್ಷಿತ ಲಾಭ. ಮಕ್ಕಳಿಂದ ಯಶಸ್ಸು, ಸ್ಥಾನಮಾನ ಪ್ರಾಪ್ತಿ. ಮನೆ ವಿಷಯಕ್ಕೆ ಇರುವ ಅಡ್ಡಿ, ಆತಂಕಗಳು ನಿವಾರಣೆಯಾಗುತ್ತವೆ. ಈ ಸಮಯದಲ್ಲಿ ದೂರಪ್ರವಾಸ ಮಾಡದೆ ಇರುವುದು ಕ್ಷೇಮ. ಲೇಖಕರಿಗೆ ಪ್ರಶಸ್ತಿ ಗೌರವ. ಬಹುದಿನಗಳಿಂದ ನಿರೀಕ್ಷಿತ ಫಲ ಪ್ರಾಪ್ತಿ. ಶುಭದಿನ 2. ಆದಿತ್ಯ ಹೃದಯ ಸ್ತೋತ್ರ 21 ಸಾರಿ ಪಠಿಸಿ.